

ಇದೆಯೋ' ಎಂದರು.

'ಅಷ್ಟೇ ಯಜಮಾನರೇ. ನನ್ನನ್ನು ಬಯ್ಯದೇ ತಿಳಿಸಿಬಿಡಿ ಸಾಕು' ಎಂದು ಮಾಯಣ್ಣ ಕೈಕಟ್ಟಿ ನಿಂತ.

ಅದಕ್ಕೆ ರಂಗಣ್ಣ 'ಸರಿಯಪ್ಪ. ಒಂದೆರಡು ದಿನ ಕಳೆಯಲಿ. ನಿನಗೆ ಹೇಳುತ್ತೇನೆ' ಎಂದರು.

ಕೆಲವು ದಿನಗಳು ಕಳೆದವು. ಒಂದು ಬಾರಿ ಮಾಯಣ್ಣನನ್ನು ಕರೆದ ಯಜಮಾನರು, 'ಮಾಯಣ್ಣ, ಊರಿನಲ್ಲಿ ಏನೋ ಗಲಾಟೆ ನಡೆಯಿತಂತೆ. ತಿಳಿದುಕೊಂಡು ಬಂದು ನನಗೆ ಹೇಳು' ಎಂದರು.

ಊರಿನ ಒಳಹೊಕ್ಕ ಆತ ಅಲ್ಲಿ ವಿಚಾರಿಸಿ ಹಿಂತಿರುಗಿ ಬಂದು, 'ಏನೋ ಆಸ್ತಿಗಾಗಿ ಯಾರೋ ಜಗಳವಾಡಿದ್ದಾರೆ ಅಷ್ಟೇ' ಎಂದ.

'ಯಾರು? ಯಾಕಂತೆ? ತಿಳಿದುಕೊಂಡು ಬಂದು ಹೇಳು'. ಸರಿ, ಇವನು ಹೊರಟ. ಕೇಳಿಕೊಂಡು ಬಂದು, 'ಮೇಲಿನ ಮನೆ ಅಣ್ಣ-ತಮ್ಮಂದಿರು. ಅವರ ತಂದೆ ತೀರಿಕೊಂಡರಲ್ಲವೇ? ಆ ಹೊಲ ನನಗೆ, ಈ ಗದ್ದೆ ನನಗೆ ಎಂದು ಕಿತ್ತಾಡಿಕೊಂಡಿದ್ದಾರೆ' ಎಂದ.

ಯಜಮಾನರು 'ಅಲ್ಲಿಗೆ ಜಗಳ ಮುಗಿಯಿತೋ ಅಥವಾ ತೀರ್ಮಾನಿಸಲು ಇನ್ನೂ ಏನಾದರೂ ಉಳಿದಿದೆಯೋ' ಎಂದರು. ಮಾಯಣ್ಣ ತಿಳಿದುಕೊಂಡೇ ಬರುತ್ತೇನೆ ಎಂದು ಮತ್ತೆ ಹೋದ, ಬಂದ.

'ಇನ್ನೂ ಕಾದಾಡುತ್ತಲೇ ಇದ್ದಾರೆ ಬುದ್ಧಿ' ಎಂದ.

ರಂಗಣ್ಣ ಅವನನ್ನು ಅಲ್ಲೇ ಕುಳ್ಳಿರಿಸಿಕೊಂಡರು. ಸೋಮಣ್ಣನನ್ನು ಕರೆದು. 'ಅದೇನು ತಗಾದೆ ನೋಡಪ್ಪ' ಎಂದು ಕಳಿಸಿದರು. ಆತ ಊರಿನೊಳಕ್ಕೆ ಹೋಗಿ ಸ್ವಲ್ಪ ಸಮಯದ ನಂತರ ಹಿಂತಿರುಗಿದ. ಯಜಮಾನರ ಮುಂದೆ ನಿಂತು ಬಿನ್ನವಿಸಿದ.

'ಮೇಲಿನ ಮನೆ ಅಣ್ಣತಮ್ಮಂದಿರು. ಗೋಪಾಲ ಮತ್ತು ಗೋವಿಂದ. ಆಸ್ತಿ ಪಾಲು ಮಾಡಿಕೊಳ್ಳುತ್ತಿದ್ದಾರೆ. ವಾದ ವಿವಾದ ಮಾಡಿಕೊಂಡೇ ಹೊಲ-ಗದ್ದೆ ಹಂಚಿಕೊಂಡಿದ್ದಾರೆ. ನಗದು, ಬೆಳ್ಳಿ ಬಂಗಾರಗಳನ್ನು ಪಾಲು ಮಾಡಿಕೊಳ್ಳಲು ಜಗಳವಾಗುತ್ತಿದೆ. ಅದು ಮಿತಿ ಮೀರಿದೆ. ನಿಮ್ಮ ಅಪ್ಪಣೆಯಂತೆಯೇ ಹಂಚಿಕೊಳ್ಳುತ್ತಾರಂತೆ. ನಿಮ್ಮಲ್ಲಿಗೇ ಇವತ್ತು ಬರುತ್ತಾರೆ.'

ರಂಗಣ್ಣನವರು ಮಾಯಣ್ಣನ ಕಡೆ ನೋಡಿದರು.

'ಅವನಿಗೇಕೆ ಹೆಚ್ಚು ಸಂಬಳ ಎಂದು ತಿಳಿಯಿತೇ ಮಾಯಣ್ಣ? ಒಂದು ವಿಷಯ ತಿಳಿಯಲು ನೀನು ಮೂರು ಬಾರಿ ಹೋಗಿ ಬಂದೆ. ಆದರೆ ಆತ ಒಂದೇ ಬಾರಿಗೆ ಎಲ್ಲ ಮಾಹಿತಿಯನ್ನೂ ತಿಳಿದು ತಂದ. ಅದು ಬುದ್ಧಿವಂತಿಕೆ. ಅದಕ್ಕೆ ಬೆಲೆ ಹೆಚ್ಚು.'

ಮಾಯಣ್ಣ ತಲೆ ತಗ್ಗಿಸಿ ನಿಂತ. 'ಗೊತ್ತಾಯಿತು ಬುದ್ಧಿ' ಎನ್ನುತ್ತ ತಲೆ ಕೆರೆದುಕೊಂಡ! ●